## ಸಮಾನತೆಯ ಆಶಯ ಸಾಕಾರಗೊಳ್ಳಲಿ



ಪ್ರತಿ ಹೊಸ ವರ್ಷಕ್ಕೂ ಹೊಸ ರೆಸಲೂಷ್ಯನ್ಸ್ ಪಟ್ಟಿಯನ್ನು ಡಿಸೆಂಬರ್ 31ಕ್ಕೆ ಬರೆದು ಜನವರಿ ಮುಗಿದರೂ ಅನುಷ್ಠಾನಕ್ಕೆ ಬರದೇ ಹೋಗುವುದರಿಂದ ಕಳೆದ ಎರಡು ವರ್ಷದಿಂದ ಹೊಸ ಬದಲಾವಣೆ ಏನಾಗಿರಬೇಕು, ಹೇಗೆ ಅನ್ನುವುದನ್ನೆಲ್ಲಾ ಬರೆದಿಟ್ಟುಕೊಳ್ಳುವುದನ್ನು ನಿಲ್ಲಿಸಿದ್ದೇನೆ. ಹೊಸ ಕ್ಯಾಲೆಂಡರ್ ಕಲಿಸಬಹುದಾದ ಪಾಠಗಳು, ಖುಷಿ, ಭರವಸೆ ಎಲ್ಲವನ್ನು ಅದರ ವರ್ತಮಾನದಲ್ಲೇ ಬದುಕುವ ಹಾಗೂ ತಿದ್ದುಪಡಿ ಮಾಡಿಕೊಳ್ಳುವ ಸುಖದ ಮುಂದೆ ಇನ್ಯಾವುದೂ ನಿಲ್ಲುವುದಿಲ್ಲ ಎಂಬ ಅರಿವು ನನ್ನೊಳಗೆ ಬಂದಾಗಿನಿಂದ ಮುಂಬರುವ ವರ್ಷದ ಬಗ್ಗೆ ಸಣ್ಣ ಕುತೂಹಲ ಉಳಿದಂತೆ ಸಾಮಾನ್ಯ ಸ್ವೀಕೃತಿಯ ಮನಸ್ಥಿತಿ ಅಷ್ಟೇ ಖಾಸಗಿ ಜೀವನಕ್ಕೆ.

ಉಳಿದಂತೆ ನಮ್ಮ ಸುತ್ತಲಿನ ಪರಿಸರದಲ್ಲಿ ಪುರುಷ ಪ್ರಧಾನ ಆಳ್ವಿಕೆಯೇ ಸಹಜ ಬದುಕು ಎಂಬ ಕಲ್ಪನೆಯನ್ನು ಪ್ರಜ್ಞಾಪೂರ್ವಕವಾಗಿ ಹೇರಿರುವ, ಅದನ್ನು ಒಪ್ಪಿ ಬದುಕುತ್ತಿರುವ ಜೊತೆಗೆ ಅದನ್ನು ಲಿಂಗಾತೀತವಾಗಿ ಪೋಷಿಸುತ್ತಿರುವ ಎಲ್ಲರನ್ನೂ ತಿದ್ದುವುದು ಕಷ್ಟವಾದರೂ ಕಡೆಯಲ್ಲಿ ಅಸಾಧ್ಯವಾದದ್ದೇನಲ್ಲ ಎಂಬುದು ನನ್ನ ನಂಬಿಕೆ. ಸಹಜೀವನ, ಸಮಾನತೆಗಳ ಮೂಲ ಪಾಠ ಮನೆಯಿಂದಲೇ ಆಗಬೇಕು. ಮಕ್ಕಳಿಗೆ ಎಲ್ಲವನ್ನೂ ಮುಕ್ತವಾಗಿ ಕಲಿಯುವ ಚೈತನ್ಯವಿರುವುದರಿಂದ ಸಾಮಾಜಿಕ ಕಟ್ಟುಪಾಡುಗಳ ಆಚೆಗೆ ಇನ್ನೊಬ್ಬರ ಆಹಾರ, ಧರ್ಮ, ಬದುಕು, ಆಯ್ಕೆ, ಕೆಲಸವನ್ನು ಗೌರವಿಸುವ ಪ್ರಬುದ್ಧತೆಯ ವಾತಾವರಣವನ್ನು ಕಟ್ಟಿಕೊಡುವುದು ಎಲ್ಲರ ಜವಾಬ್ದಾರಿ.

ಒದನ್ನು ಕೋವಿಡ್‌ನಿಂದಾಗಿ ಮೊಟಕು ಮಾಡುತ್ತಿರುವ ಮಕ್ಕಳು ಮತ್ತೆ ಶಾಲೆಗಳತ್ತ ಮುಖ ಮಾಡಲು ನಾವೆಲ್ಲ ನಮ್ಮ ನಮ್ಮ ನೆಲೆಗಳಲ್ಲಿ ಕೆಲಸ ಮಾಡಬೇಕಿದೆ. ಯಾವುದೇ ದೇಶದ ಭವಿಷ್ಯದ ಕನಸನ್ನು ಸದೃಢ ಮಾಡುವುದು ವಿದ್ಯೆ, ಪೌಷ್ಟಿಕಾಂಶದ ಹದದಲ್ಲಿ ಬೆಳೆದ ಮಕ್ಕಳಿಂದಲೇ ಆಗಿರುವುದರಿಂದ ಯಾವ ಮಗುವೂ ಹಸಿವಿನಿಂದ, ಓದಿನಿಂದ ವಂಚಿತವಾಗದಂತೆ, ಹಾಗೇ ಸಮಾನತೆಯ ಆಶಯವು ವಾಸ್ತವದಲ್ಲಿ ಬೇರೂರುವಂತೆ ಮಾಡುವುದು ನಮ್ಮ 2022ರ ಆಶಯವಾಗಲಿ.

**-ಸ್ಮಿತಾ ಮಾಕಳ್ಳಿ**
ಕವಿ, ತಿಪಟೂರು

## ಓಂಕಾರ ನಾದ ನಿರಂತರವಾಗಿರಲಿ



ಮುದುಡಿದ ಮನ ಅರಳಬೇಕು, ನೊಂದ ಮನ ಸ್ವಚ್ಛಂದವಾಗಿ ಹಾರಾಡಬೇಕು, ಬೆಂದು ಹೋದ ಬದುಕಿಗೆ ತಂಗಾಳಿ ಬೀಸಬೇಕು, ಇವೆಲ್ಲದಕ್ಕೂ ಹೃದಯ ತಟ್ಟುವ ಹಿತವಾದ ಸಂಗೀತ ಬೇಕು, ಕಳೆದ ಎರಡು ವರ್ಷಗಳಿಂದ ಸಂಗೀತ ಕಛೇರಿಗಳಿಲ್ಲದೆ ಭಣಗುಟ್ಟಿದ ಜಗತ್ತಿನಲ್ಲಿ ಮತ್ತೆ ಓಂಕಾರ ನಾದ ನಿರಂತರವಾಗಿ ಮೊಳಗಬೇಕು... ಇವೆಲ್ಲವೂ ಹೊಸ ವರ್ಷದ ಆದಿಯಿಂದಲೇ ಆರಂಭವಾಗಲಿ ಎಂಬುದೇ ಮೊದಲ ಆಶಯ.

ಕೊರೊನಾ ಬಂದಾಗಿನಿಂದ ಸಂಗೀತ ಕಛೇರಿಗಳು ಎಲ್ಲೆಲ್ಲಿಯೂ ನಡೆಯಲಿಲ್ಲ. ಕಳೆದ ಎರಡು ವರ್ಷಗಳಿಂದ ನಮ್ಮ ಯೂರೋಪ್ ಸಂಗೀತ ಪ್ರವಾಸ ನಡೆಯಲೇ ಇಲ್ಲ. ಎಲ್ಲ ಅಂತರರಾಷ್ಟ್ರೀಯ ಸಂಗೀತ ಕಾರ್ಯಕ್ರಮಗಳು ರದ್ದಾದವು. ಆದರೆ ಈ ವರ್ಷ ಹೀಗಾಗೋದು ಬೇಡ. ಸಂಗೀತಾಸಕ್ತರಿಗೆ 'ಸಿಹಿಯಾದ ಸಂಗೀತ ಊಟ' ಉಣಬಡಿಸಬೇಕು. ಹೊಸ ವರ್ಷದಲ್ಲಿ ಆನ್‌ಲೈನ್ ಕಛೇರಿಗಳೆಲ್ಲ ನಡೆಯದೆ ವೇದಿಕೆ ಕಛೇರಿಗಳೇ ನಡೆಯುವಂತಾಗಲಿ. ಸಂಗೀತದ ಮೂಲಕ ಮನಃಶಾಂತಿ ಕೊಡಲು ಅವಕಾಶ ಸಿಗುವಂತಾಗಲಿ ಎಂಬುದೇ ಹೊಸ ವರ್ಷದ ಹೊಸ್ತಿಲಲ್ಲಿ ನನ್ನ ಕೋರಿಕೆ.

ಈ ಪಾಂಡೆಮಿಕ್, ಜಂಜಡ ಎಲ್ಲ ದೂರವಾಗಿ ವಿಶ್ವದಲ್ಲಿ ಮತ್ತೆ ಸುಖ ಶಾಂತಿ ನೆಮ್ಮದಿ ದೊರಕುವಂತಾಗಲಿ. ಅದು ಸಂಗೀತದ ಮೂಲಕವೇ ನೆರವೇರಲಿ. ಹ್ಯಾಪಿ ಮ್ಯೂಸಿಕ್ ಇಯರ್!..!

**-ಸುಮಂತ್ ಮಂಜುನಾಥ್,** ಪಿಟೀಲು ವಾದಕ, ಮೈಸೂರು

ಮುಖಮಾಡಿ, 'ಎಲ್ಲವೂ ಬೇಗ ಮೊದಲಿನಂತಾದರೆ ಸಾಕು' ಎಂದು ಪ್ರಾರ್ಥಿಸುತ್ತಿದೆ. ಆ ಆಶಯದ ಬೆಚ್ಚನೆಯ ಭಾವ ಮನಸು ಸೋಕಿದ ಮರುಕ್ಷಣವೇ 'ಮೊದಲಿನಂತಾಗುವುದು ಅಂದರೆ ಏನು?' ಎಂಬ ಪ್ರಶ್ನೆಯೊಂದು ಛಡಿಯೇಟಿನಂತೆ ಅಪ್ಪಳಿಸುತ್ತದೆ.

ಹೌದು, 'ಮೊದಲಿನಂತಾಗುವುದು' ಅಥವಾ 'ನಾರ್ಮಲ್' ಆಗುವುದು ಎಂದರೆ ಏನು?

ಮನಸ್ಸು ಮನಸ್ಸುಗಳನ್ನು ಒಡೆಯುವ ಕೆಲಸಕ್ಕೆ ಮರುಚಾಲನೆ ಸಿಗುವುದೇ? ಮದ್ದು–ಗುಂಡುಗಳು ಸಿಡಿಯುವ ಕ್ರೂರ ಉನ್ಮಾದವು ಮರುಕಳಿಸುವುದೇ? ಜಾತಿ–ಧರ್ಮಗಳ ಹೆಸರಿನಲ್ಲಿ, ಸಂಪತ್ತಿನ ಮದದಲ್ಲಿ ನಡೆಯುವ ದೌರ್ಜನ್ಯಗಳು, ಸೋಗಲಾಡಿತನಗಳು ಮತ್ತೆ ಪ್ರಾರಂಭವಾಗುವುದೇ? ಎಂಥ ಕೊರೊನಾ ದಾಳಿಗೂ ತಗ್ಗದೆ ನಿರಂತರವಾಗಿ ನಡೆಯುತ್ತಲೇ ಇರುವ ಸ್ತ್ರೀ ದೌರ್ಜನ್ಯ, ಅತ್ಯಾಚಾರಗಳ ಬರ್ಬರ ಕೃತ್ಯಗಳ, ಅದನ್ನು ಸಮರ್ಥಿಸಿಕೊಂಡು ಜೋಕು ಕತ್ತರಿಸುವ ಜನನಾಯಕ ಹೃದಯಹೀನ ಮಾತುಗಳ ಮೆರವಣಿಗೆಗೆ ದಾರಿ ಮಾಡಿಕೊಡುವುದೇ? ಅಥವಾ ಈ ಎಲ್ಲದರ ಕುರಿತು, ನಮ್ಮ ಮೂಗಿನ ನೇರಕ್ಕೆ, ಕತ್ತನ್ನೇ ಸೀಳುವ ಹಾಗೆ ಸ್ಟೇಟಸ್ ಎಂಬ ಚೂರಿ ಎಸೆದು, ಕರುಳು ಹರಿಯುವ ಹಾಗೆ ಕಮೆಂಟ್ ಎಂಬ ಖಡ್ಗ ಬೀಸಿ ಎದುರಾಳಿಯನ್ನು ಛಿದ್ರ ಛಿದ್ರಗೊಳಿಸಿ ಹೇಷಾರವಗೈವ ಸೋಷಿಯಲ್ ಮೀಡಿಯಾದ ವರ್ಚುವಲ್ ಯುದ್ಧದಲ್ಲಿ ಮುಳುಗಿಹೋಗುವುದೇ?

ಏನದು 'ಮೊದಲಿನಂತಾಗುವುದು' ಎಂದರೆ?

ಪ್ರಶ್ನೆಗಳು ಮಗ್ಗಲ ಮುಳ್ಳಿನ ಹಾಗೆ ಚುಚ್ಚುತ್ತಿರುವಾಗಲೇ ಕಣ್ಣುಗಳು ಆಸೆಯಿಂದ ಮತ್ತೆ ನಿನ್ನೆಡೆಗೆ ಹೊರಳುತ್ತಿವೆ. ನಮ್ಮೆಡೆಗೆ ನಡೆದುಬರುತ್ತಿರುವ ನೀನು ಒಳಿತನ್ನೇ ಹೊತ್ತು ತರುವಂತಾಗಲಿ ಎಂದು ಮನಸ್ಸು ಮನಸಾ ಹಾರೈಸುತ್ತಿದೆ. ಇದ್ದಲ್ಲೇ ಎರಡಾಗುವ, ಎರಡು ನಾಲ್ಕಾಗುವ, ಹಾಗೆಯೇ ಮುಂದುವರೆದು ಕ್ಷಣಗಳಲ್ಲಿ ಸಾವಿರವಾಗುವ ವೈರಾಣು ಸರಪಳಿಯ ಅಟ್ಟಹಾಸ ನಿನ್ನೊಂದಿಗಾದರೂ ಕೊನೆಗೊಳ್ಳಲಿ. ಹಸಿವಿನಿಂದ ಯಾವ ಜೀವವೂ ಅಸುನೀಗದಿರಲಿ. ಮುಚ್ಚಿದ ಬಾಗಿಲ ಒಳಗೂ, ತೆರೆದ ಬಯಲಿನಲ್ಲೂ ಶಾಂತಿ ನೆಲೆಸಲಿ. ನಾವೀಗ ನಿಂತಿರುವ ಸಂಜೆಗತ್ತಲಲ್ಲಿ ಅಂಥ ಭರವಸೆಯ ದೊಂದಿ ಹಿಡಿದು ಬರಬೇಕು ನೀನು.

ಜಗತ್ತಿನ ಬೇರೆ ಜೀವಜಗತ್ತುಗಳು ತಮ್ಮ ದೈನಿಕಗಳನ್ನು ಹೇಗೆ ಮುರಿದು ಕಟ್ಟಿಕೊಳ್ಳುತ್ತವೋ ನಮಗೆ ಪೂರ್ತಿಯಾಗಿ ತಿಳಿದಿಲ್ಲ. ಈ ಭೂಮಿಯ ಮೇಲಿರುವ ಅತ್ಯಂತ ಚತುರ ವರ್ಗ ಎಂಬ ಮೂಗಿನ ನೇರದ ಅಹಂಕಾರ ನಮ್ಮನ್ನು ಅತ್ತ ಕಡೆಗೆ ಮುಖವನ್ನೂ ಮಾಡದಂತೆ ತಡೆದಿದೆ. ಯಾವುದೂ ಶಾಶ್ವತವಲ್ಲದ, ಮುರಿದು ಕಟ್ಟುವುದೊಂದೇ ನೆಮ್ಮದಿಯ ಮೂಲವಾದ ಈ ಲೋಕದಲ್ಲಿ ನಮ್ಮ ಸುಖ–ದುಃಖಗಳಿಗೆ ತಾಣ ಒದಗಿಸಲು ಬರುವವ/ಳು ನೀನು. 21 ಎನ್ನುವುದು ಜೀವಚೈತನ್ಯ ಉಕ್ಕಿ ಹರಿಯುವ ಉತ್ಸಾಹದ ವಯಸ್ಸೂ ಹೌದು. ಆ ವಯಸ್ಸಿಗೇ ನೋವನ್ನೆಲ್ಲ ತಡೆದುಕೊಳ್ಳುವ, ಎಂಥ ನೋವಲ್ಲೂ ಜೀವನಪ್ರೀತಿ ಉಳಿಸಿಕೊಂಡು ಮನದುಂಬಿ ನಗುವ ಶಕ್ತಿ ಇರುತ್ತದೆ. ಆ ಶಕ್ತಿ–ಸತ್ವಕ್ಕಾಗಿ ನಾವೂ ಕಾದಿದ್ದೇವೆ. ನೀನೊಮ್ಮೆ ಬಂದುಬಿಟ್ಟರೆ ಎಲ್ಲವೂ ಇದ್ದಲ್ಲೇ ಸರಿಹೋಗುತ್ತದೆ ಎಂದು ಮುಗ್ಧವಾಗಿ ನಂಬಬೇಕು ಅನ್ನಿಸುತ್ತದೆ. ಈ ನಂಬಿಕೆಯನ್ನು ನಡೆಸಿಕೊಡುತ್ತೀ ತಾನೇ?

ಹಾಗಿದ್ದರೆ ನಿನಗಿದೋ ಪ್ರೀತಿಯ ಸ್ವಾಗತ.